ವ್ಯಾಪಾರವನ್ನೇ ಕಸುಬನ್ನಾಗಿ ಮಾಡಿಕೊಂಡಿದ್ದರು. ಆಗಾಗ್ಗೆ ಅವರು ಗದಾಯ್ ಠಾಕೂರರನ್ನು ನೋಡಲೆಂದು ದಕ್ಷಿಣೇಶ್ವರಕ್ಕೆ ಹೋಗುತ್ತಿದ್ದರು. ಒಮ್ಮೆ ಅವರ ಮನೆಗಳಿಗೆ ಮತ್ತು ಹುಲ್ಲಿನ ಮೇದೆಗಳಿಗೆ ಬೆಂಕಿ ತಗುಲಿತು. ಎಲ್ಲವೂ ಉರಿದು ಭಸ್ಮವಾಯಿತು. ಅವರ ಕುಟುಂಬದ ಯಜಮಾನನಿಗೆ ಒಂದು ದಿನ ರಾತ್ರಿ ಸ್ವಪ್ನದಲ್ಲಿ ಅಲ್ಲಾಹು ಆಜ್ಞಾಪಿಸಿದನು, "ನೋಡು! ನಿನ್ನ ಸಂಸಾರಕ್ಕೆ ಅಮಂಗಲವು ಹೊಕ್ಕಿದೆ. ಪೀರ್ ದರ್ಗಾದಲ್ಲಿ ಸಿನ್ನಿಯನ್ನು (ಹಾಲು, ಹಿಟ್ಟು ಮತ್ತು ಕೆಲವು ಹಣ್ಣುಗಳಿಂದ ಮಾಡಿದ ಖಾದ್ಯ) ನೈವೇದ್ಯವಾಗಿ ನೀಡು. ಕಾಮಾರಪುಕುರದ ಗದಾಯ್ ಠಾಕೂರ್ ನಿನ್ನ ಬದಲಾಗಿ ಸಿನ್ನಿಯನ್ನು ನೈವೇದ್ಯ ಮಾಡಲಿ. ಎಲ್ಲವೂ ಸರಿಹೋಗುತ್ತದೆ!" ಗದಾಯ್ ಠಾಕೂರರನ್ನು ಕರೆದುಕೊಂಡು ಬರಲು ನಾನು ಹೊರಟೆ. ಮೊದಲು ಅವರು, "ಅಲ್ಲಾಹುವಿಗೆ ನೀವು ಪ್ರಾರ್ಥನೆ ಸಲ್ಲಿಸಬೇಕಾದರೆ, ಒಬ್ಬ ಹಿಂದೂವಿಗೆ ಬೇಕಾಗುವಂತೆ, ನಿಮಗೇಕೆ ಒಬ್ಬ ಬ್ರಾಹ್ಮಣನ ಮಧ್ಯಸ್ಥಿಕೆ ಬೇಕು? ನೇರವಾಗಿಯೇ ಅವನನ್ನು ಪ್ರಾರ್ಥಿಸಬಾರದೇಕೆ? ಗದ್ದೆಯನ್ನು ದಾಟಿ ಹೋಗಬೇಕಾದರೆ ಅದರ ಮಧ್ಯೆ ಇರುವ ಕಾಲ್ದಾರಿಯಲ್ಲೇ ಹೋಗು. ಸುತ್ತಿ ಬಳಸಿ ಹೋಗುವುದೇಕೆ?" ಎಂದೆಲ್ಲ ಹೇಳಿ ಆಗ ಬರಲೊಪ್ಪಲಿಲ್ಲ. ಆದರೆ, ಮುಂದೊಮ್ಮೆ ಪೀರ್ ದರ್ಗಾಕ್ಕೆ ಬಂದು ಸಿನ್ನಿ ನೈವೇದ್ಯವನ್ನು ಅರ್ಪಿಸಿದರು. ಮುಸಲ್ಮಾನ ಕುಲೀನ ಜಮೀನ್ದಾರರ ಮನೆಯಲ್ಲಿ ಬಹಳ ಹೊತ್ತು ಇದ್ದು ಅವಿರತವಾಗಿ ಅಲ್ಲಾಹುವಿನ ಮಾತನ್ನೇ ಆಡುತ್ತಿದ್ದರು. ಗದಾಯ್ ಠಾಕೂರರು ಧರ್ಮದ ಮರ್ಮವನ್ನು ಅದೆಷ್ಟು ಸಹಜ–ಸುಂದರವಾಗಿ ತಿಳಿಹೇಳಬಲ್ಲವರಾಗಿದ್ದರೆಂದರೆ, ದೊಡ್ಡ ದೊಡ್ಡ ಮೌಲ್ವಿಗಳೂ ಅವರ ಮುಂದೆ ಸೋಲನ್ನೊಪ್ಪಿಕೊಳ್ಳಬೇಕಾಗಿತ್ತು.

ಇನ್ನೊಂದು ದಿನದ ಘಟನೆಯನ್ನೂ ಹೇಳಲೇಬೇಕು. ಆ ಘಟನೆಯಿಂದ ನನ್ನ ಮನಸ್ಸಿಗೆ ಗದಾಯ್ ಠಾಕೂರರು ಅಲ್ಲಾಹುವಿನ ದೂತರೆಂದೇ ಭಾಸವಾಯಿತು! ಅದಕ್ಕೆ ಮುಂಚೆ ಅಷ್ಟು ತಿಳಿವಳಿಕೆಯೂ ನನ್ನಲ್ಲಿ ಇರಲಿಲ್ಲ. ಏನೇ ಆಗಲಿ, ಒಮ್ಮೆ ಗದಾಯ್ ಠಾಕೂರರು ನನ್ನನ್ನು ಕೋಕಂದರ್‌ನಲ್ಲಿರುವ ಶಿವನ ಕುರಿತಾದ ಉತ್ಸವವನ್ನು (ಬಂಗಾಳಿಯಲ್ಲಿ ಗಾಜನ್ ಎನ್ನುತ್ತಾರೆ) ನೋಡಲು ಕರೆದುಕೊಂಡು ಹೋದರು. ಉತ್ಸವವನ್ನು ನೋಡಿ ನಾವು ಸಂಜೆ ಹೊತ್ತಿಗೆ ಹಿಂತಿರುಗುವ ಸಮಯದಲ್ಲಿ ಇದ್ದಕ್ಕಿದ್ದಂತೆ ಆಕಾಶದಲ್ಲಿ ಮೋಡ ಕವಿಯಿತು. ಅದೆಂಥ ಪ್ರಬಲವಾದ ಬಿರುಗಾಳಿ ಹಾಗೂ ಮಿಂಚು! ದೊಡ್ಡ ದೊಡ್ಡ ಸಿಡಿಲು ಹೊಡೆಯುತ್ತಿದೆ! ಇನ್ನು ನಮಗೆ ಉಳಿಗಾಲವಿಲ್ಲವೆಂದೆನಿಸಿತು. ನೆನೆದುಕೊಂಡೇ ನಡೆದುಕೊಂಡು ಹೋಗುತ್ತಿದ್ದೆವು. ಇದ್ದಕ್ಕಿದ್ದಂತೆ ನಮಗೆ ಸ್ವಲ್ಪ ದೂರದಲ್ಲೇ ಒಂದು ಸಿಡಿಲು ಬಡಿಯಿತು. ಆಗ ಮೈದಾನದಿಂದ ದನಗಳ ಹಿಂಡಿನ ಜತೆ ದನಗಾಹಿಗಳೂ ಹಿಂತಿರುಗುತ್ತಿದ್ದರು. ಸಿಡಿಲು ಹೊಡೆದ ಜೊತೆಯಲ್ಲೇ ಅದೆಂತಹ ಮಿಂಚಿನ ಬೆಳಕು! ಅದು ನಮ್ಮ ಕಣ್ಣುಗಳನ್ನು ಕೋರೈಸುತ್ತಿತ್ತು. ಕಣ್ಣುಗಳನ್ನು ಮುಚ್ಚಿಕೊಂಡು ನಾವೆಲ್ಲರೂ ಕುಳಿತುಬಿಟ್ಟೆವು. ಅನ್ನಿಸಿತು, ನಮ್ಮ ಕತೆ ಇನ್ನು ಮುಗಿದ ಹಾಗೇ ಎಂದು. ಸ್ವಲ್ಪ ಹೊತ್ತಿನ ನಂತರ ನಾವು ಕಣ್ಣನ್ನು ತೆರೆದು ನೋಡುತ್ತೇವೆ, ನಮ್ಮ ಮುಂದೆ ನಾಲ್ಕು ದನಗಳು ಸತ್ತು ಬಿದ್ದಿವೆ; ಅವುಗಳ ಜೊತೆಗೆ ಇಬ್ಬರು ದನಗಾಹಿಗಳೂ ಕೂಡ! ಅದೆಂಥ ಭಯಂಕರ ದೃಶ್ಯ! ಮೈದಾನ ರಕ್ತದಿಂದ ತೋಯ್ದಿದೆ! ನಾವು ಹಳ್ಳಿಗೆ ಬಂದು ಈ ವಿಷಯವನ್ನು ಎಲ್ಲರಿಗೂ ತಿಳಿಸಿದೆವು. ಅನಂತರ ಎಲ್ಲರೂ ಮೈದಾನಕ್ಕೆ ಓಡಿದರು. ಆದರೆ, ನಾವು ಬದುಕುಳಿದೆವು. ಆ ಸಂದರ್ಭದಲ್ಲಿ ಗದಾಯ್ ಠಾಕೂರ್ ನನಗೆ ಹೇಳಿದರು: "ಹೇ ಅಲಿ! ನೀನು ಇನ್ನೂ ಬಹಳ ನೋಡುವುದಕ್ಕೆ ಬಾಕಿ ಇದೆ. ಆದ್ದರಿಂದಲೇ ಈ ಸಲ ಬದುಕುಳಿದೆ. ನಿನಗೀಗ ಹೊಸ ಜನ್ಮ ಸಿಕ್ಕಿದೆಯೆಂದೇ ತಿಳಿದುಕೊ."

ಗದಾಯ್ ಠಾಕೂರ್ ನಿಜವಾಗಿಯೂ ಪೀರರೇ. ಅವರನ್ನು ಕೆಲವರು 'ಹಿಂದೂ ಸಾಧಕ'ನೆಂಬುದಾಗಿ ಕರೆಯುತ್ತಾರೆ. ನಾನು ಅವರನ್ನು 'ಅಲ್ಲಾಹುವಿನ ದೂತ' ರೆಂದೇ ಕರೆಯುತ್ತೇನೆ. ಅವರನ್ನು ಆ ಭಗವಂತನೇ ಸ್ವಯಂ ಭೂಮಿಗೆ ಕಳುಹಿಸಿರಬೇಕು, ಇಲ್ಲದಿದ್ದರೆ ಇಸ್ಲಾಂ ಧರ್ಮದ ಮೇಲೆ ಅವರಿಗೆ ಇಷ್ಟು ಮಮತೆ ಏಕೆ? ಅವರ ಬುದ್ಧಿ ಹೇಗಿತ್ತೋ ಹಾಗೆಯೇ ಅವರ ಹೃದಯ ಕೂಡ ದೊಡ್ಡದು. ಸಾಮಾನ್ಯವಾಗಿ ಇವೆರಡೂ ಒಬ್ಬನಲ್ಲಿ ಸೇರುವುದಿಲ್ಲ. ಆಗಾಗ್ಗೆ ಅವರ ಬಾಯಿಯಿಂದ ಈ ಮಾತುಗಳನ್ನು ಕೇಳುತ್ತಿದ್ದೆ:

**"ಕೂಪಮಂಡೂಕ ಆಗಬೇಡ. ಆಕಾಶದಲ್ಲಿರುವ ಪಕ್ಷಿಯಂತಾಗು. ನಿನಗೆ ಇಷ್ಟವಾದಲ್ಲಿ ಹಾರಾಡು, ನಿನಗೆ ಇಷ್ಟ ಬಂದಲ್ಲಿ ಹೋಗು. ಗುಡಿಸಲಿನ ಮೇಲ್ಛಾವಣಿಯ ಸೂರು ಎಷ್ಟು ಕೆಳಮುಖವಾಗಿ ವಾಲಿಕೊಂಡಿರುತ್ತದೊ, ಅಷ್ಟು ಮಳೆ ನೀರನ್ನು ಸಲೀಸಾಗಿ ನಿಲ್ಲದೆ ಹರಿದುಕೊಂಡು ಹೋಗುವಂತೆ ಮಾಡುತ್ತದೆ. ಆದರೆ, ಅದು ನಿನ್ನ ಕೋಣೆಗೆ ಬರುವ ಗಾಳಿ ಮತ್ತು ಬೆಳಕನ್ನೂ ತಡೆಹಿಡಿದುಬಿಡುತ್ತದೆ. ಆದರೆ, ಗುಡಿಸಲಿನ ಮೇಲ್ಛಾವಣಿಯ ಸೂರನ್ನು ಸ್ವಲ್ಪ ಎತ್ತರದಲ್ಲಿರಿಸಿದ್ದೇ ಆದರೆ, ಅದು ಕೋಣೆಯೊಳಗೆ ಹೆಚ್ಚು ಗಾಳಿ ಮತ್ತು ಬೆಳಕು ಬರುವಂತೆ ಮಾಡುತ್ತದೆ."**

ನಾನು ಅವರನ್ನು ಅನೇಕ ದಿನಗಳಿಂದ ನೋಡಿದ್ದೇನೆ; ಅವರು ದನಗಾಹಿಗಳು, ಸಂತಾಲರು, ಕಾರ್ಮಿಕರು, ಗಾಣಿಗರು, ಕೂಲಿಗಳು, ಹಿಂದೂಗಳು, ಮುಸಲ್ಮಾನರು, ಎಲ್ಲರ ಜೊತೆಗೂ ಮುಕ್ತವಾಗಿ ಬೆರೆಯುತ್ತಿದ್ದುದನ್ನು ನೋಡಿದ್ದೇನೆ. ಅವರೆಲ್ಲರೂ ಗದಾಯ್ ಠಾಕೂರರಿಗೆ ಆಪ್ತರೂ, ಪ್ರಿಯರೂ ಆಗಿದ್ದರು.

•

# ಸ್ವಾಮಿ ಶಾರದಾನಂದರು


ಡಾ. ಕೆ. ಅನಂತರಾಮು

ಶಾರದಾನಂದ ಎಂಬುದು ಶರತ್ಕಾಲಸಂಬಂಧಿಯಾದ ಹೆಸರು. ಶರದೃತುವಿನಲ್ಲಿ ಮಳೆಯ ಅಬ್ಬರವು ಮುಗಿದು, ಕೆರೆಕಟ್ಟೆಗಳೆಲ್ಲ ತಿಳಿಗೊಂಡು ಶುಭ್ರಜಲದಿಂದ ತುಂಬಿ ತುಳುಕುತ್ತಿರುತ್ತವೆ. ಆಗಸದಲ್ಲಿ ಬೆಳ್ಮೋಡಗಳ ಸಂಚಲನ ಪ್ರಾರಂಭವಾಗುತ್ತದೆ. ಹಕ್ಕಿಗಳು ಗರಿಬಿಚ್ಚಿ ಹಾರತೊಡಗುತ್ತವೆ. ಮಂದಮಾರುತನು ಹಿತಕರವಾಗಿ ಬೀಸತೊಡಗುತ್ತಾನೆ. ರಾತ್ರಿಯಲ್ಲಿ ಚಂದ್ರನು ನೀಲಾಕಾಶದಲ್ಲಿ ಪ್ರಕಾಶಪೂರ್ಣನಾಗಿ ಬೆಳಗುತ್ತ 'ಶರಶ್ಚಂದ್ರ' ನೆಂಬ ವಿಶೇಷಣಕ್ಕೆ ಪಾತ್ರನಾಗುತ್ತಾನೆ. ಪ್ರಕೃತಿಯು ಅತ್ಯಂತ ಚೈತನ್ಯಮಯವಾಗಿರುತ್ತದೆ. ಆ ಹೊತ್ತಿನ ಆನಂದವನ್ನು ತಮ್ಮೊಳಗೆ ಅನುಭವಿಸಿ, ಅದನ್ನೇ ಲೋಕಕ್ಕೂ ಹಂಚಿದ ಪುಣ್ಯಪುರುಷರೇ ಸ್ವಾಮಿ ಶಾರದಾನಂದರು. ಅವರು ಶರತ್ಕಾಲದ ಚಂದ್ರಮನೇ ಆಗಿ ಪರಮಹಂಸಾಕಾಶವನ್ನು ಬೆಳಗಿಸಿದರು. ಶ್ರೀಮಾತೆ ಶಾರದಾದೇವಿಯವರ ಪುತ್ರರತ್ನವೆಂಬ ಅಗ್ಗಳಿಕೆಗೆ ಪಾತ್ರವಾಗುವ ಮೂಲಕವೂ ಅವರು ತಮ್ಮ ಸಂನ್ಯಾಸ ನಾಮಧೇಯವನ್ನು ಸಾರ್ಥಕಪಡಿಸಿಕೊಂಡರು.

**ಪ್ರತಿಭಾವಂತ ಬಾಲಕ :** ಶಾರದಾನಂದರು ೨೩-೧೨-೧೮೬೫ರಲ್ಲಿ ಕೋಲ್ಕೊತ್ತೆಯ ಸಿರಿವಂತ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನ್ಮತಾಳಿದರು. ಗಿರೀಶಚಂದ್ರ ಚಕ್ರವರ್ತಿ-ನೀಲಮಣಿದೇವಿಯರ ಹಿರಿಮಗ ಅವರು. ಶರಶ್ಚಂದ್ರ ಚಕ್ರವರ್ತಿ ಎಂದು ನಾಮಕರಣ ಮಾಡಿ, ಮುದ್ದಿನಿಂದ ಶರತ್ ಎಂದು ಕರೆಯುತ್ತಿದ್ದರು. ದೈವಭಕ್ತಿ ಸಂಪನ್ನೆಯಾದ ತಾಯಿ ನೀಲಮಣಿದೇವಿಯು ಮಾಡುತ್ತಿದ್ದ ನಿತ್ಯಪೂಜಾದಿಗಳನ್ನು ಶರತ್ ನೆಟ್ಟ ಕಣ್ಣುಗಳಿಂದ ನೋಡುತ್ತ ಆನಂದಪಡುತ್ತಿದ್ದರು. ತರುವಾಯ ತಾವೂ ಆ ಪೂಜೆಯನ್ನು ಅನುಕರಿಸುತ್ತಿದ್ದರು.

ಕೋಲ್ಕೊತಾ ಮಹಾನಗರಿಯಲ್ಲಿಯೇ ಅವರ ವಿದ್ಯಾಭ್ಯಾಸವೆಲ್ಲವೂ ನಡೆಯಿತು. ಪ್ರತಿಭಾವಂತ ಬಾಲಕರಾಗಿದ್ದ ಅವರು ವಾರ್ಷಿಕ ಪರೀಕ್ಷೆಗಳಲ್ಲಾಗಲಿ, ಚರ್ಚಾಕೂಟಗಳಲ್ಲಾಗಲಿ, ವ್ಯಾಯಾಮಶಾಲೆಯಲ್ಲಾಗಲಿ ತಮ್ಮ ಹೆಸರು ಪ್ರಕಾಶಿಸುವಂತೆ ಮಾಡುತ್ತಿದ್ದರು. ಎಂಟ್ರೆನ್ಸ್ ಮುಗಿದ ಬಳಿಕ ಸೆಂಟ್ ಜೇವಿಯರ್ ಕಾಲೇಜಿನ ವಿದ್ಯಾರ್ಥಿಯಾಗಿ ಅಲ್ಲಿನ ಪ್ರಾಂಶುಪಾಲರಾದ ಲಾಫ್ರಾಂಟ್ ಅವರ ಗಮನವನ್ನು ಸೆಳೆದರು. ಹೇಗಾದರೂ ಇರಲೆಂದು ಲಾಫ್ರಾಂಟರು ಬಿಡುವಿನ ವೇಳೆಯಲ್ಲಿ ಶರತ್‌ರಿಗೆ ಬೈಬಲ್ ಗ್ರಂಥವನ್ನು ಬೋಧಿಸಿದರು. ಆ ಸಮಕಾಲದಲ್ಲಿಯೇ ಕೇಶವಚಂದ್ರ ಸೇನರ ಬ್ರಾಹ್ಮಸಮಾಜವನ್ನೂ ಹೊಕ್ಕು ಅದರ ತಿರುಳೇನೆಂಬುದನ್ನೆಲ್ಲ ಕೂಲಂಕಷವಾಗಿ ಅಧ್ಯಯನ ಮಾಡಿದರು. ಕೇಶವಚಂದ್ರ ಸೇನರು 'ಇಂಡಿಯನ್ ಮಿರರ್' ಪತ್ರಿಕೆಯಲ್ಲಿ ಶ್ರೀರಾಮಕೃಷ್ಣರನ್ನು ಮೆಚ್ಚಿ ಬರೆದಿದ್ದ ಲೇಖನವೊಂದು ಶರತ್‌ರ ಮನನಕ್ಕೆ ದೊರೆಯಿತು. "ಕೇಶವಚಂದ್ರರ ಅಭಿಮಾನಕ್ಕೆ ಪಾತ್ರರಾಗಿರುವ ಆ ಮಹನೀಯರನ್ನು ಕಾಣಲೇಬೇಕು" ಎಂಬ ಆಕಾಂಕ್ಷೆ ಅವರ ಚಿತ್ತದಲ್ಲಿ ನೆಲೆಯೂರಿತು.

**ಬನ್ನಿ, ಮಕ್ಕಳೇ ಬನ್ನಿ:** ಶರತ್ ೧೮೮೩ರಲ್ಲಿ ತಮಗೆ ಸೂಕ್ತವಾದ ದಿನವೊಂದನ್ನು ಗೊತ್ತುಮಾಡಿಸಿಕೊಂಡು, ದಕ್ಷಿಣೇಶ್ವರಕ್ಕೆ ಹೋಗಿ ಪರಮಹಂಸರ ಸನ್ನಿಧಾನದಲ್ಲಿ ಕುಳಿತರು. ಪರಮಹಂಸರಾದರೋ ಆ ದಿನಗಳಲ್ಲಿ ಸಚ್ಛಿಷ್ಯರ ಆಗಮನವನ್ನೇ ಹಾರೈಸುತ್ತಿದ್ದರು. ನಿತ್ಯವೂ ಸಂಧ್ಯಾಕಾಲದಲ್ಲಿ ಕಟ್ಟಡವೊಂದರ ಮಹಡಿಯನ್ನೇರಿ ಕೋಲ್ಕೊತ್ತೆಯ ಬೀದಿಗಳನ್ನೇ ನಿಟ್ಟಿಸುತ್ತ, "ಬನ್ನಿ ಮಕ್ಕಳೇ ಬನ್ನಿ, ನೀವು ಎಲ್ಲಿದ್ದರೂ ಬನ್ನಿ, ನಾನು ನಿಮಗಾಗಿ ಹಂಬಲಿಸುತ್ತಿದ್ದೇನೆ" ಎಂದು ಉಚ್ಚ ಕಂಠದಲ್ಲಿ ಕೂಗಿ ಕರೆಯುತ್ತಿದ್ದರು. ಆ ಕರೆಗೆ ಓಗೊಟ್ಟರೋ ಎಂಬಂತೆ ಶರತ್ ಆಗಮಿಸಿದರು. "ನನ್ನ ಹೆಸರು ಶರತ್" ಎಂದು ತಮ್ಮ ಪರಿಚಯವನ್ನು ಹೇಳಿಕೊಳ್ಳುತ್ತಿದ್ದಂತೆಯೇ ಪರಮಹಂಸರು ಹಿಗ್ಗಿಹೀರೇಕಾಯಾಗಿಬಿಟ್ಟರು. "ಆಹಾ, ಇವನು ನಮ್ಮ ಹುಡುಗನೇ ಸರಿ" ಎಂದು ಮೊದಲ ನೋಟದಲ್ಲಿಯೇ ತೀರ್ಮಾನಿಸಿಕೊಂಡುಬಿಟ್ಟರು. ಆ ಹೊತ್ತಿನಲ್ಲಿ ಕೆಲವು ಭಕ್ತರೂ ಅಲ್ಲಿ ಕೂಡಿಕೊಂಡಿದ್ದರು.



ಆ ಪ್ರಥಮದರ್ಶನದ ದಿನದಂದೇ ಪರಮಹಂಸರು ಕೆಲವು ಮಹತ್ವದ ವಿಷಯಗಳ ಮೇಲೆ ಬೆಳಕುಚೆಲ್ಲಿದರು. "ಇಂದಿನ ಯುವಕರು ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಗಿ ಸಂಸಾರದ ಸುಳಿಗೆ ಸಿಲುಕುತ್ತಿದ್ದಾರೆ. ದೇವರ ಸ್ಮರಣೆಗೆ ಸಮಯ ಹೊಂದಿಸಿಕೊಳ್ಳಲಾರದೆ ಪತನ ಹೊಂದುತ್ತಿದ್ದಾರೆ. ಅವರು ಆಧ್ಯಾತ್ಮಿಕವಾಗಿ ಸ್ವಲ್ಪ ಮುಂದುವರಿದ ಮೇಲೆ ಸಂಸಾರಕ್ಕೆ ಬಿದ್ದರೂ ಅದರಿಂದ ಕೇಡಾಗುವುದಿಲ್ಲ. ಮುದ್ರೆಯೊತ್ತಿದ ಮೇಲೆ ಸುಟ್ಟ ಇಟ್ಟಿಗೆಗಳಂತೆ ಅವರು ಸಂಸಾರಕ್ಕೆ ಬಿದ್ದಮೇಲೂ ಆಧ್ಯಾತ್ಮಿಕತೆಯ ಮುದ್ರೆಯಿಂದಾಗಿ ಸಂರಕ್ಷಿತರಾಗಿರುತ್ತಾರೆ" ಎಂದರು. ಹಾಗೆಯೇ ಬೈಬಲ್‌ನಲ್ಲಿ ಬರುವ

ಸಂತ ಪೌಲನ ಈ ಮಾತನ್ನು ಓದಿಸಿದರು. ಅದರಲ್ಲಿ ಹೀಗೆ ಬರೆದಿತ್ತು : "...ಆದ್ದರಿಂದ ನಾನು ಮದುವೆಯಾಗದವರಿಗೂ, ವಿಧವೆಯರಿಗೂ ಹೇಳುತ್ತೇನೆ, ನಾನಿದ್ದಂತೆಯೇ ಇರುವುದು ಅವರಿಗೆ ಒಳ್ಳೆಯದು. ಆದರೆ ಅವರಿಗೆ ಹಾಗೆ ಇರಲು ಸಾಧ್ಯವಾಗದೆ ಹೋದರೆ, ಮದುವೆ ಮಾಡಿಕೊಳ್ಳಲಿ; ಏಕೆಂದರೆ ತನ್ನನ್ನು ತಾನು ದಹಿಸಿಕೊಳ್ಳುವುದಕ್ಕಿಂತ ಮದುವೆಯಾಗುವುದು ಒಳ್ಳೆಯದು."

ಧ್ಯಾನಕ್ಕೆ ಕುಳಿತಾಗ ಶರತ್‌ರಿಗೆ ಮನಸ್ಸು ಏಕಾಗ್ರವಾಗುತ್ತಿರಲಿಲ್ಲ. ಆಗ ಪರಮಹಂಸರು ಶರತ್‌ರ ಭ್ರೂಮಧ್ಯವನ್ನು ತಮ್ಮ ಹೆಬ್ಬೆರಳಿಂದ ಒತ್ತಿ, ಅವರು ಧ್ಯಾನದಲ್ಲಿ ತನ್ಮಯರಾಗುವಂತೆ ಮಾಡಿದರು. ಒಂದುದಿನ ಪರಮಹಂಸರು ತಮ್ಮ ಭಕ್ತರನ್ನೆಲ್ಲ ಎದುರಿಗೆ ಕೂರಿಸಿಕೊಂಡು ತಾವು ಕಲ್ಪವೃಕ್ಷವಾಗಿ, "ನಿಮಗೆ ಏನೇನು ಬೇಕೋ ಕೇಳಿಕೊಳ್ಳಿ" ಎಂದರು. ಆಗ ಶರತ್, "ಎಲ್ಲ ಜೀವಕೋಟಿಗಳಲ್ಲೂ ಭಗವಂತನನ್ನು ಕಾಣುವ ಶಕ್ತಿಯನ್ನು ಕರುಣಿಸಿ" ಎಂದು ಬೇಡಿಪಡೆದರು.

ಪರಮಹಂಸರೊಮ್ಮೆ ನರೇಂದ್ರರ ಶಕ್ತಿಸಾಮರ್ಥ್ಯಗಳನ್ನು ಇನ್ನಿಲ್ಲವೆಂಬಂತೆ ಹಾಡಿಹೊಗಳಿದರು. ಅದನ್ನು ಕೇಳಿಸಿಕೊಂಡ ಶರತ್, "ಆ ಮಹಿಮನನ್ನು ನಾನು ಕಾಣಲೇಬೇಕು" ಎಂದು ತಾವಾಗಿಯೇ ನರೇಂದ್ರರನ್ನು ಕಂಡು ಮಾತನಾಡಿಸಿ, ಅವರ ಸ್ನೇಹವನ್ನು ಸಂಪಾದಿಸಿಕೊಂಡರು. ಹೀಗೆ ಅವರಿಬ್ಬರೂ ಗೆಳೆಯರಾದ ವಿಚಾರ ಪರಮಹಂಸರಿಗೆ ತಿಳಿದಾಗ "ಅಡುಗೆ ಮನೆಯ ಡಬ್ಬಿಗೆ ಯಾವ ಮುಚ್ಚಳ ಎಂಬುದು ಚೆನ್ನಾಗಿ ತಿಳಿದಿರುತ್ತದೆ" ಎಂದು ಹೇಳಿ ಸಂತೋಷಪಟ್ಟರು. ಭವಿಷ್ಯದಲ್ಲಿ ವಿವೇಕಾನಂದರು ಡಬ್ಬಿಯಾಗಿ ತುಂಬಿಕೊಂಡುದನ್ನೆಲ್ಲ, ಶಾರದಾನಂದರು ಮುಚ್ಚಳವಾಗಿ ಕಾಪಾಡಿ, ಲೋಕಾರ್ಪಣ ಮಾಡಬಲ್ಲವರಾಗುತ್ತಾರೆ ಎಂಬ ಸಂಕೇತ ಪರಮಹಂಸರ ವಾಣಿಯಲ್ಲಿತ್ತು.

**ಸಂನ್ಯಾಸದಿಂದ ಹಿಮ್ಮೆಟ್ಟಿಸಲು ಉಪಾಯಗಳು:** ಶರತ್ ೧೮೮೫ ರಲ್ಲಿ ಎಫ್.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಔಷಧಾಲಯವೊಂದನ್ನು ನಡೆಸುತ್ತಿದ್ದ ತಂದೆ ಗಿರೀಶಚಂದ್ರರು ತಮ್ಮ ಮಗ ವೈದ್ಯನಾದರೆ ಒತ್ತಾಸೆಯಾಗುತ್ತದೆ ಎಂದು ಭಾವಿಸಿದರು. ಅದು ಶರತ್‌ರಿಗೆ ಇಷ್ಟವಿಲ್ಲದಿದ್ದರೂ ತಂದೆಯ ಒತ್ತಾಯಕ್ಕೆ ಮಣಿದು, ಮೆಡಿಕಲ್ ಕಾಲೇಜಿಗೆ ಸೇರಿದರು. ಆದರೆ ಈ ನಡುವೆ ಪರಮಹಂಸರು ಗಂಟಲುಬೇನೆಗೆ ತುತ್ತಾಗಿ ಕಾಶೀಪುರದ ತೋಟದಮನೆಯನ್ನು ಸೇರಿದಾಗ, ಶರತ್ ಸದ್ಗುರುಸೇವೆಯಲ್ಲಿ ತತ್ಪರರಾಗಿ ವಿದ್ಯಾಭ್ಯಾಸಕ್ಕೆ ಎಳ್ಳುನೀರು ಬಿಟ್ಟುಬಂದರು.

"ಆ ಪರಮಹಂಸರಿಂದ ತಾನೆ ಇಷ್ಟೆಲ್ಲ 'ಅನಾಹುತ'ವಾಗುತ್ತಿರುವುದು, ಅವರ ಸಂಗವನ್ನೇ ಬಿಡಿಸಿಬಿಡುತ್ತೇನೆ, ತಾಳು" ಎಂದು ತಂದೆ ಗಿರೀಶಚಂದ್ರರು ಆಲೋಚಿಸಿದರು. ಅವರಿಗೆ ಜಗನ್ಮೋಹನ ತಾರಕಾಲಂಕಾರ ಎಂಬ ವಿದ್ವನ್ಮಣಿಯೊಬ್ಬರು ಕುಲಗುರುಗಳಾಗಿದ್ದರು. ಅವರನ್ನು ಕುರಿತು ಗಿರೀಶಚಂದ್ರರು, "ನಮ್ಮ ಮಗನು ಪರಮಹಂಸರ ಜೊತೆಯಲ್ಲಿರುವಾಗ ನೀವು ಅವರೊಡನೆ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚೆಮಾಡುತ್ತ ಕಠಿಣವಾದ ಪ್ರಶ್ನೆಗಳನ್ನು ಅವರ ಮೇಲೆ ಎಸೆಯಿರಿ, ಪರಮಹಂಸರು ಉತ್ತರಿಸಲಾರದೆ ಸೋತುಹೋಗುತ್ತಾರೆ. ನಮ್ಮ ಹುಡುಗನಿಗೆ ಆಗ ಅವರ ಯೋಗ್ಯತೆ ಎಷ್ಟೆಂದು ತಿಳಿಯುತ್ತದೆ. ನೀವೂ ಆಗಲೇ ಅವನಿಗೂ ಸ್ವಲ್ಪ ಬುದ್ಧಿಹೇಳಿ" ಎಂದು ತಮ್ಮದೇ ಆದ ಉಪಾಯವನ್ನು ಹೇಳಿಕೊಟ್ಟರು. ಅದರಂತೆಯೇ ಎಲ್ಲವೂ ಸಾಗಿತು. ಪರಮಹಂಸರಲ್ಲಿ ಪ್ರಶ್ನೆ ಕೇಳಿ ನಿರುತ್ತರರನ್ನಾಗಿ ಮಾಡಬಲ್ಲವರು ಅದುವರೆಗೆ ಯಾರೂ ಹುಟ್ಟಿರಲಿಲ್ಲ. ಅವರ ವೈದುಷ್ಯವನ್ನು ಕಂಡ ಜಗನ್ಮೋಹನರು ವಿಸ್ಮಯರಾಗಿಬಿಟ್ಟರು. ಆಮೇಲೆ ಗಿರೀಶಚಂದ್ರರನ್ನು ಕುರಿತು, "ಅವರೊಬ್ಬ ವಿಭೂತಿಪುರುಷರು. ಅಂತಹವರ ಸಂಗವನ್ನು ತೊರೆದುಬಿಡು ಎಂದು ನಾನು ಯಾವ ಬಾಯಲ್ಲಿ ಹೇಳಲಿ?" ಎಂದುಬಿಟ್ಟರು.

ಇಷ್ಟಾದರೂ ಗಿರೀಶಚಂದ್ರರು ತಮ್ಮ ಪ್ರಯತ್ನವನ್ನು ಕೈಬಿಡದೆ ಒಂದು ದಿನ ತಮ್ಮ ಮಗನೊಡನೆ ದರ್ಶನಾರ್ಥಿಯಂತೆ ಪರಮಹಂಸರ ಬಳಿಗೆ ಹೋದರು. "ಸ್ವಾಮಿ, ಮದುವೆ ಮಾಡಿಕೊಳ್ಳುವಂತೆ ನೀವೇ ನಮ್ಮ ಹುಡುಗನಿಗೆ ಸ್ವಲ್ಪ ಬುದ್ಧಿವಾದ ಹೇಳಬೇಕು. ನಿಮ್ಮ ಮಾತನ್ನು ಅವನು ಕೇಳುತ್ತಾನೆ" ಎಂದು ವಿನಂತಿಸಿಕೊಂಡರು. ಆ ಮಾತನ್ನು ಕೇಳುತ್ತಿದ್ದಂತೆಯೆ ಶರತ್, "ನಾನು ಮದುವೆಯಾಗುವವನಲ್ಲ. ಒಂದು ವೇಳೆ ಪರಮಹಂಸರು ಮದುವೆಯಾಗೆಂದು ಆಜ್ಞೆ ಮಾಡಿದರೂ ಈ ವಿಷಯದಲ್ಲಿ ಮಾತ್ರ ಅದನ್ನು ಉಲ್ಲಂಘಿಸುತ್ತೇನೆ" ಎಂದು ತಂದೆಯ ಮುಖದ ಮೇಲೆ ಹೊಡೆದಂತೆ ಹೇಳಿಬಿಟ್ಟರು. ಆಗ ಪರಮಹಂಸರು, "ನೀವೇ ಕೇಳಿಸಿಕೊಂಡಿರಲ್ಲಾ, ಇನ್ನು ನಾನೇನು ಹೇಳುವುದಿದೆ" ಎಂದು ಸುಮ್ಮನಾದರು. ಮುಂದೆ ಗಿರೀಶಚಂದ್ರರು ಮಗನನ್ನು ಕೊಠಡಿಯಲ್ಲಿ ಕೂಡಿಹಾಕಿ, ಪರಮಹಂಸರ ಸಂಪರ್ಕವನ್ನು ಕಡಿದುಹಾಕುವ ಪ್ರಯತ್ನಕ್ಕೆ ಕೈಯಿಕ್ಕಿ, ಅದರಲ್ಲಿಯೂ ವಿಫಲರಾದರು.

ಪರಮಹಂಸರು ರುಗ್ಣಶಯ್ಯೆಯಲ್ಲಿರುವಾಗಲೇ ಶರತ್‌ರಿಗೆ ಅವರ ದಿವ್ಯಹಸ್ತದಿಂದ ಕಾಷಾಯವಸ್ತ್ರ, ಜಪಮಾಲೆಗಳು ಕರುಣಿಸಲ್ಪಟ್ಟಿದ್ದುವು. ಅವರು ಮುಕ್ತರಾದ ಬಳಿಕ ವಿವೇಕಾನಂದರ ನೇತೃತ್ವದಲ್ಲಿ ಶರತ್ ವಿಧ್ಯುಕ್ತವಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, 'ಸ್ವಾಮಿ ಶಾರದಾನಂದ' ಎಂಬ ಆಶ್ರಮನಾಮವನ್ನೂ ಪಡೆದುಕೊಂಡರು. ಇನ್ನು ವಿರೋಧಿಸಿ ಫಲವಿಲ್ಲವೆಂದು ಆ ಮುಹೂರ್ತಕ್ಕೆ ಶಾರದಾನಂದರ ತಂದೆತಾಯಿಗಳೂ ಬಂದು, "ಆತ್ಮಸಾಕ್ಷಾತ್ಕಾರದ ನಿನ್ನ ಅಭೀಪ್ಸೆ ಈಡೇರಲಪ್ಪಾ" ಎಂದು ಆಶೀರ್ವದಿಸಿದರು.

**ಮಹೋನ್ನತ ಸಾಧನೆಗಳು :** ಸಂನ್ಯಾಸಿಯಾದ ಮೇಲೆ ಶಾರದಾನಂದರು ಭರತಖಂಡದ ಪ್ರಸಿದ್ಧ ತೀರ್ಥಕ್ಷೇತ್ರಗಳನ್ನೆಲ್ಲ ಬಹಳ ಶ್ರಮಪಟ್ಟು ಸಂದರ್ಶಿಸಿದರು. ವಿವೇಕಾನಂದರ ಕರೆಯ ಮೇರೆಗೆ ವೇದಾಂತದ ಪ್ರಚಾರಕ್ಕಾಗಿ ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳಿಗೆ ಹೋದರು. ಅಲ್ಲೆಲ್ಲ ಸದ್ಗುರುವಿನ ಕೀರ್ತಿಪತಾಕೆಯನ್ನು ಹಾರಿಸಿದರು. ತಮ್ಮ ಹಿಂದಿನ ಜನ್ಮದಲ್ಲಿ ಶಾರದಾನಂದರು ಏಸುವಿನ ಶಿಷ್ಯಪ್ರಮುಖರಲ್ಲಿ ಒಬ್ಬರಾಗಿದ್ದರೆಂದು ಪರಮಹಂಸರು ಹೇಳಿದ್ದರು. ಅದಕ್ಕೆ ತಕ್ಕಂತೆ ಬೈಬಲ್ ಅಧ್ಯಯನ ನಡೆದಿತ್ತು. ರೋಂ ನಗರದಲ್ಲಿ ಸೆಂಟ್ ಪೀಟರ್ ಚರ್ಚ್ ಅನ್ನು ಅವಲೋಕಿಸುತ್ತಲೇ ಅವರು ತಮ್ಮ ಪೂರ್ವಜನ್ಮದ ಸ್ಮೃತಿಯಲ್ಲಿ ಮೈಮರೆತುಬಿಟ್ಟಿದ್ದರು.

ಎರಡೂವರೆ ವರ್ಷಗಳ ಕಾಲ, ವೇದಾಂತದ ಜ್ಯೋತಿಯನ್ನು ವಿದೇಶಗಳಲ್ಲಿ ಬೆಳಗಿಸಿ, ಶಾರದಾನಂದರು ೧೮೯೮ ರಲ್ಲಿ ಭಾರತಕ್ಕೆ ಮರಳಿಬಂದರು. ಆಮೇಲೆ ರಾಮಕೃಷ್ಣಮಠ ಮತ್ತು ಮಿಷನ್ನಿನ ಅಭಿವೃದ್ಧಿಗಾಗಿ ಮೂರುದಶಕಗಳಷ್ಟು ದೀರ್ಘಕಾಲ, ಅದರ ಕಾರ್ಯದರ್ಶಿಗಳಾಗಿ ಅಹರ್ನಿಶಿ ದುಡಿದರು. ಕಿರಿಯ ಸಂನ್ಯಾಸಿಗಳನ್ನು ತರಬೇತುಗೊಳಿಸುವುದು, 'ಉದ್ಬೋಧನ್' ಎಂಬ ಮಠದ ಪತ್ರಿಕೆಯ ಸಂಪಾದಕರಾಗಿ ಅದನ್ನು ಪ್ರತಿ ತಿಂಗಳೂ ಪ್ರಕಟಿಸುವುದು, ಶ್ರೀಮಾತೆಯ ಯೋಗಕ್ಷೇಮವನ್ನು ನೋಡಿಕೊಳ್ಳುವುದು, ಅವರಿಗಾಗಿ ವಾಸಗೃಹವೊಂದನ್ನು ಕಟ್ಟುವುದು, ಅವರು ಮುಕ್ತರಾದ ಬಳಿಕ ಅವರಿಗಾಗಿ ಸ್ಮಾರಕಗಳನ್ನು ನಿರ್ಮಿಸುವುದು, ಉಪನ್ಯಾಸಯಾತ್ರೆಗಳನ್ನು ಕೈಗೊಳ್ಳುವುದು, ಅಭಿವೃದ್ಧಿಕಾರ್ಯಗಳಿಗಾಗಿ ಧನಸಂಗ್ರಹ ಮಾಡುವುದು, ಬ್ರಿಟಿಷ್ ಗವರ್ನರ್ ಅವರ ಮನದಲ್ಲಿ ಮಠದ ವಿಚಾರದಲ್ಲಿದ್ದ ದುರ್ಭಾವನೆಗಳನ್ನು ತೊಲಗಿಸಿ, ಸದಭಿಪ್ರಾಯ ಮೂಡುವಂತೆ ಮಾಡುವುದು, ಮಹಾಸಂಘದ ಪ್ರಥಮ ಮಹಾಸಮ್ಮೇಳನವನ್ನು ನಡೆಸುವುದು, ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ಸೇವಾಕಾರ್ಯಗಳಿಗಾಗಿ ಸಂನ್ಯಾಸಿಗಳನ್ನು ಸಜ್ಜುಗೊಳಿಸುವುದು, 'ಶ್ರೀರಾಮಕೃಷ್ಣಲೀಲಾ ಪ್ರಸಂಗ'ವೆಂಬ ಬೃಹದ್ ಗ್ರಂಥರತ್ನವನ್ನು ಬರೆಯುವುದು – ಮುಂತಾದ ಹತ್ತಾರು ಮಹತ್ಕಾರ್ಯಗಳನ್ನು ಶಾರದಾನಂದರು ಸಾಧಿಸಿದರು.

**ಮಾನವೀಯ ಗುಣಸಾಗರ :** ಶಾರದಾನಂದರು ಕಷ್ಟದಲ್ಲಿರುವವರನ್ನು, ಸಂಕಟದಲ್ಲಿರುವವರನ್ನು ಕಂಡಾಗ ಕರಗಿ ನೀರಾಗಿ ಬಿಡುತ್ತಿದ್ದರು. ಅಂಥವರಿಗೆ ತಮ್ಮ ಕೈಲಾಗುವ ಎಲ್ಲ ಸಹಾಯವನ್ನೂ ಮಾಡುತ್ತಿದ್ದರು. ಅವರ ಸ್ಥಿತಪ್ರಜ್ಞತೆ ಅಪೂರ್ವವಾಗಿತ್ತು. ಇಂಗ್ಲೆಂಡಿಗೆ ಹಡಗಿನಲ್ಲಿ ಪ್ರಯಾಣಮಾಡುವಾಗ ಚಂಡಮಾರುತವೊಂದು ಮೇಲೆದ್ದು ಮೃತ್ಯುದೇವತೆಯು ತಾಂಡವನೃತ್ಯವನ್ನಾಡಿದಳು. ಆಗ ಪ್ರಯಾಣಿಕರೆಲ್ಲರೂ ಮೃತ್ಯುಭಯದಿಂದ ಜರ್ಜರಿತರಾಗಿಬಿಟ್ಟರು. ಆದರೆ ಶಾರದಾನಂದರು ಮಾತ್ರ 'ಬಪ್ಪುದು ತಪ್ಪದು' ಎಂದು ದೃಢಮನಸ್ಕರಾಗಿ, ಸದ್ಗುರುವನ್ನು ಸ್ಮರಿಸುತ್ತ, ಎಲ್ಲವನ್ನೂ ಸಾಕ್ಷೀಭಾವದಿಂದ ನೋಡಿದರು. ಸದ್ಗುರುವು ಎಲ್ಲರನ್ನೂ ಕಾಪಾಡಿದರು.

ಶಾರದಾನಂದರು ಶ್ರೇಷ್ಠ ಆಡಳಿತಗಾರರಾಗಿದ್ದರು. ನಾಯಕತ್ವದ ಸಕಲ ಸಲ್ಲಕ್ಷಣಗಳೂ ಅವರನ್ನು ಆಶ್ರಯಿಸಿಕೊಂಡಿದ್ದುವು. ಆತುರದ ನಿರ್ಣಯಗಳನ್ನು ಕೈಗೊಳ್ಳುವುದು ಅವರ ಜಾಯಮಾನಕ್ಕೆ ಒಗ್ಗುತ್ತಿರಲಿಲ್ಲ. ಚಾಡಿಮಾತುಗಳು ತುಂಬಾ ವಿನಾಶಕಾರಿ ಎಂದು ಭಾವಿಸಿ, 'ಈ ಕಿವಿಯಲ್ಲಿ ಕೇಳಿ ಆ ಕಿವಿಯಿಂದ' ಹೊರಹಾಕಿಬಿಡುತ್ತಿದ್ದರು. ಇವರು ಅತ್ಯಂತ ಮಿತಭಾಷಿಯಾಗಿದ್ದರು. ತಮ್ಮ ಸಂಘದ ಅತಿ ಕಿರಿಯ ಸಂನ್ಯಾಸಿಯನ್ನೂ ತಮಗೆ ಸಮಾನರಂತೆ ನೋಡಿಕೊಳ್ಳುತ್ತಿದ್ದರು.

ಸಂಗೀತಪ್ರೇಮಿಯಾಗಿದ್ದ ಶಾರದಾನಂದರು ಸುಶ್ರಾವ್ಯವಾಗಿ ಹಾಡುತ್ತಿದ್ದರು. "ಮಠದಲ್ಲಿ ಯಾರೋ ಯುವತಿ ಗುಟ್ಟಾಗಿ ಸೇರಿಕೊಂಡು ಹಾಡುತ್ತಿದ್ದಾಳೆ. ಈ ಸಂನ್ಯಾಸಿಗಳ ಬಣ್ಣವನ್ನು ಬಯಲುಮಾಡಬೇಕು" ಎಂದು ಅಕ್ಕಪಕ್ಕದ ಹೆಂಗಸರು ಒಂದು ರಾತ್ರಿಯಲ್ಲಿ ಮಠದ ಬಾಗಿಲನ್ನು ಬಡಿದು ತೆಗೆಯಿಸಿ, ಶಾರದಾನಂದರು ಹಾಡುತ್ತಿದ್ದುದನ್ನು ಕಂಡು, ತಮ್ಮ ಮುಖಕ್ಕೆ ತಾವೇ ಮಂಗಳಾರತಿ ಎತ್ತಿಕೊಂಡು ಹೋದ ಘಟನೆಯೂ ಒಮ್ಮೆ ನಡೆಯಿತು.

ಶ್ರೀಮಾತೆಯ ವಿಚಾರದಲ್ಲಿ ಅವರಿಗಿದ್ದ ಭಕ್ತಿ ಅಮೋಘವಾಗಿತ್ತು. ಒಮ್ಮೆ ಭಕ್ತನೊಬ್ಬನು ಶಾರದಾನಂದರಿಗೆ ಭವ್ಯವಾದ ಪುಷ್ಪಮಾಲಿಕೆಯನ್ನು ತೊಡಿಸಿದನು. ಆಗ ಸ್ವಾಮಿಗಳು, "ನನಗೇಕೆ ಈ ವೈಭವದ ಕುಸುಮಮಾಲೆ? ಶ್ರೀಮಾತೆಯ ಮನೆಯ ಬಾಗಿಲ ಬಂಟನನ್ನು ಯಾರಾದರೂ ಹೀಗೆ ಸಿಂಗರಿಸುತ್ತಾರೆಯೆ?" ಎಂದು ವಿನಯದಿಂದ ನುಡಿದರು. "ಶ್ರೀರಾಮಕೃಷ್ಣರು ಎಲ್ಲ ಪರಿಸ್ಥಿತಿಗಳಲ್ಲೂ ನನ್ನ ಬೆಂಗಾವಲಿಗಿರುತ್ತಾರೆ. ನಾನು ಒಬ್ಬಂಟಿಗನಾಗಿರುವುದು ಸಾಧ್ಯವೇ ಇಲ್ಲ" ಎಂಬ ದೃಢವಿಶ್ವಾಸ ಅವರಿಗಿತ್ತು. ಯಾರಿಗೆ ಶತ್ರು ಎಂಬಾತನೊಬ್ಬನು ಹುಟ್ಟಿಯೇ ಇಲ್ಲವೋ, ಅಂಥವನನ್ನು 'ಅಜಾತಶತ್ರು' ಎನ್ನುತ್ತಾರೆ. ಪ್ರೇಮಮೂರ್ತಿಯಾಗಿದ್ದ ಶಾರದಾನಂದರು ಹಾಗೆ ಅಜಾತಶತ್ರುವೆನಿಸಿದ್ದರು.

ಶಾರದಾನಂದರು ಸದಾಕಾಲ ಆನಂದಮಯರಾಗಿರಲು ಇಷ್ಟಪಡುತ್ತಿದ್ದರು. ಪರಮಹಂಸರು ಕಾಷಾಯವನ್ನು ಕೊಟ್ಟಬಳಿಕ ಒಂದು ದಿನ 'ಭಿಕ್ಷೆ ಬೇಡಿಕೊಂಡು ಬಾರಪ್ಪಾ' ಎಂದು ಆಜ್ಞಾಪಿಸಿದರು. ಗುರುವಿನ ಆಜ್ಞೆಯನ್ನು ತಲೆಯಲ್ಲಿ ಹೊತ್ತು ಹೊರಟ ಸ್ವಾಮಿಗಳು, ಯಾವುದೋ ಮನೆಯ ಮುಂದೆ 'ಭವತಿ ಭಿಕ್ಷಾಂ ದೇಹಿ' ಎಂದಾಗ ಮನೆಯೊಡತಿ ಕೋಪದಿಂದ "ಕಡಿದರೆ ಮೂರಾಳಾಗುತ್ತೀಯೆ, ಹೀಗೆ ಭಿಕ್ಷಮಾಡುವುದೇಕೆ? ಟ್ರಾಂ ಕಂಡಕ್ಟರ್ ಆಗಿಯಾದರೂ ಹೊಟ್ಟೆ ಹೊರೆಯಬಾರದೇ" ಎಂದು ನಿಂದಿಸಿದಳು. ಭಗವಂತನ ಸೇವೆಗಾಗಿ ಸಿರಿಸಂಪದಗಳನ್ನೆಲ್ಲ ತೃಣೀಕರಿಸಿ ಬಂದಿರುವ ರಾಜಕುಮಾರರು ಇವರೆಂದು ಆ ಪ್ರಾಕೃತಮಹಿಳೆ ಏನು ಬಲ್ಲಳು! ಬರಬರುತ್ತ ಶಾರದಾನಂದರು ಸ್ಥೂಲಕಾಯರಾಗಿಬಿಟ್ಟರು.